RNU AIR DHARWAD

OCTOBER 25, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮೇಕೆದಾಟು ಯೋಜನೆ ಸೇರಿದಂತೆ, ರಾಜ್ಯದ ಮಹತ್ವದ ಯೋಜನೆಗಳಿಗೆ ಪರಿಸರ, ಅರಣ್ಯ ಹಾಗೂ ವನ್ಯಜೀವಿ ಇಲಾಖೆ ಅನುಮತಿ ಕೋರಿ ಸಲ್ಲಿಸಿದ ಮನವಿಗೆ, ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಖಾತೆ ಸಚಿವ ಭೂಪೇಂದರ್ ಯಾದವ ಧನಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ತಿಳಿಸಿದ್ದಾರೆ. ಮೇಕೆದಾಟು ಬಹುಪಯೋಗಿ ಸಮಾಂತರ ಜಲಾಶಯ ಯೋಜನೆ, ಬೆಂಗಳೂರಿನ ಕುಡಿಯುವ ನೀರಿನ ಅಗತ್ಯಗಳನ್ನು ಪೂರೈಸಲು ಹಾಗೂ ಜಲವಿದ್ಯುತ್ ಉತ್ಪಾದಿಸಲು ರಾಜ್ಯದ ಸರ್ಕಾರದ ಬಹುಕಾಲದ ಬೇಡಿಕೆಯಾಗಿದೆ ಎಂದರು.

<><><>

ದೇಶದ ನಾಗರಿಕರು, ಪ್ರಸ್ತುತ ಸ್ಥಳೀಯ ಉತ್ಪನ್ನಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ. ವೋಕಲ್ ಫಾರ್ ಲೋಕಲ್ ಎಂಬ ಮನೋಭಾವ, ಸ್ಥಳೀಯ ಉತ್ಪನ್ನಗಳನ್ನು ಜಾಗತಿಕ ಮಾರುಕಟ್ಟೆಗೆ ತಲುಪುವಂತೆ ಮಾಡುತ್ತಿವೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದರು. ಆಕಾಶವಾಣಿಯ, ಮನ್ ಕಿ ಬಾತ್ ಕಾರ್ಯಕ್ರಮದ, 139 ನೇ ಸಂಚಿಕೆಯಲ್ಲಿ, ದೇಶ ವಿದೇಶಗಳಲ್ಲಿರುವ ಭಾರತೀಯರನ್ನು ಉದ್ದೇಶಿಸಿ ಮಾತನಾಡಿದ ಅವರು, ಬಿಹಾರದ ಮಖಾನಾ ಪ್ರಸ್ತುತ ಗ್ರೀಸ್ ತಲುಪುತ್ತಿದೆ. ಕರ್ನಾಟಕ ತೊಗರಿ ಬೇಳೆ ಮಾಲ್ಡೀವ್ಸ್ ಗೆ ರಫ್ತಾಗುತ್ತಿದೆ ಎಂದರು.

<><><>

ಬೆಳಗಾವಿ ಜಿಲ್ಲೆ, ಚನ್ನಮ್ಮನ ಕಿತ್ತೂರಿನಲ್ಲಿ, ಕಿತ್ತೂರು ಉತ್ಸವ –2026 ವೈವಿಧ್ಯಮಯ ಕಾರ್ಯಕ್ರಮಗಳ ಮೂಲಕ ಜರುಗುತ್ತಿದೆ. ಮೂರು ದಿನಗಳ, ಕಿತ್ತೂರು ಉತ್ಸವ, ಇಂದು ಸಂಜೆ ಸಮಾರೋಪಗೊಳ್ಳಲಿದ್ದು, ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಪಾಲ್ಗೊಳ್ಳಲಿದ್ದಾರೆ.

<><><>

ರಾಜ್ಯ ಸರ್ಕಾರ, 2026–27ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವ, "ಸಶಕ್ತ ಕರ್ನಾಟಕ" ಕಾರ್ಯಕ್ರಮದಡಿ, ಬೆಳಗಾವಿ ಸೇರಿದಂತೆ ರಾಜ್ಯದ ನಾಲ್ಕು ಪ್ರಮುಖ ಸ್ಥಳಗಳಲ್ಲಿ ರಾಷ್ಟ್ರ ಮಟ್ಟದ ಮ್ಯಾರಥಾನ್ ಆಯೋಜಿಸಲಾಗಿದೆ. ಇಂದು ಬೆಳಗ್ಗೆ ಬೆಳಗಾವಿ ಸುವರ್ಣ ವಿಧಾನಸೌಧದ ಆವರಣದಲ್ಲಿ, ಮ್ಯಾರಥಾನ್ ಓಟಕ್ಕೆ ಜಿಲ್ಲಾಧಿಕಾರಿ ಮೊಹಮ್ಮದ್ ರೋ 'ನ್ ಚಾಲನೆ ನೀಡಿದರು.

<><><>

ದೇಶದ 11 ಕೋಟಿ ರೈತರಿಗೆ, ವಿಶ್ವ ಡಿಜಿಟಲ್ ಗುರುತಿನ ಚೀಟಿ ನೀಡಲಾಗಿದೆ ಎಂದು, ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಖಾತೆ ಸಚಿವ, ಶಿವರಾಜಸಿಂಗ ಚೌವ್ಹಾಣ ತಿಳಿಸಿದ್ದಾರೆ. ರೈತರಿಗೆ ಸರ್ಕಾರಿ ಯೋಜನೆಗಳು, ಬ್ಯಾಂಕ್ ಸಾಲ, ಬೆಳೆ ವಿಮೆ ಹಾಗೂ ಪ್ರಕೃತಿ ವಿಕೋಪ ಪರಿಹಾರದ ಪ್ರಯೋಜನಗಳನ್ನು ಪಾರದರ್ಶಕವಾಗಿ ಮತ್ತು ತ್ವರಿತವಾಗಿ ತಲುಪಿಸಲು, ಈ ವ್ಯವಸ್ಥೆ ನೆರವಾಗಲಿದೆ, ಎಂದಿದ್ದಾರೆ. ಅಗತ್ಯ ದಾಖಲೆಗಳಿಗಾಗಿ, ಪದೇ ಪದೇ ಸರ್ಕಾರಿ ಕಚೇರಿಗಳಿಗೆ ಅಲೆಯುವ ತೊಂದರೆಯೂ ತಪ್ಪಲಿದೆ ಎಂದು, ಸಚಿವರು ಹೇಳಿದ್ದಾರೆ. ಕೇಂದ್ರ ಸರ್ಕಾರ, 2024ರ ಸೆಪ್ಟೆಂಬರ್ 2 ರಂದು ಡಿಜಿಟಲ್ ಕೃಷಿ ಅಭಿಯಾನವನ್ನು ಆರಂಭಿಸಿತ್ತು.

<><><>

ವಿಶ್ವ ಅಯೋಡಿನ್ ಕೊರತೆ, ನ್ಯೂನತೆ ನಿಯಂತ್ರಣ ಜಾಗೃತಿ ಸಪ್ತಾಹಕ್ಕೆ, ಬಳ್ಳಾರಿಯಲ್ಲಿ ಚಾಲನೆ ದೊರೆತಿದೆ. ರುಕ್ಮಿಣಮ್ಮ ಚಂಗಾರೆಡ್ಡಿ ಸ್ಮಾರಕ, ಸರ್ಕಾರಿ ವಾಣಿಜ್ಯ ಮಹಾವಿದ್ಯಾಲಯದಲ್ಲಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ, ಜಿಲ್ಲಾ ಸರ್ವೇಕ್ಷಣಾ ಘಟಕ, ಈ ಕಾರ್ಯಕ್ರಮ ಆಯೋಜಿಸಿತ್ತು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ

<><><>